4) ಕುಂದಾಪುರ ಪಟ್ಟಣಕ್ಕೆ ಶಾಶ್ವತವಾಗಿ ನೀರು ಸರಬರಾಜು ಮಾಡಲು, ಪಟ್ಟಣದ ಹತ್ತಿರದಲ್ಲಿ ಹರಿಯುವ ವಾರಾಹಿ ನದಿಯನ್ನು ಮೂಲವಾಗಿಟ್ಟುಕೊಂಡು ನೀರು ಸರಬರಾಜು ಮತ್ತು ಸಮಗ್ರ ಭೂಗತ ಒಳಚರಂಡಿ ಯೋಜನೆಗಳನ್ನು ತಯಾರಿಸಬೇಕಾಗಿದೆ. ಈ ಎರಡು ಯೋಜನೆಗಳ ಅಂದಾಜು ಪಟ್ಟಿಗಳನ್ನು ತಯಾರಿಸಿ ಮಂಡಳಿಯು ಸರ್ಕಾರಕ್ಕೆ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಲಾಗುವುದು. ಸರ್ಕಾರದ ಅನುಮೋದನೆ ದೊರೆತ ನಂತರ, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಗುಳ್ಳೇದಗುಡ್ಡ ಕ್ಷೇತ್ರದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು

423 - ಶ್ರೀ ರಾಜಶೇಖರ ವಿ ಶೀಲವಂತ (ಗುಳ್ಳೇದ ಗುಡ್ಡ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗುಳ್ಳೇದಗುಡ್ಡ ಮತ ಕ್ಷೇತ್ರದಲ್ಲಿ ಎಷ್ಟು ಸಣ್ಣ ಕೈಗಾರಿಕೆಗಳು ನಡೆಯುತ್ತಿವೆ?*

ಆ) *ಇಲ್ಲಿಯವರೆಗೆ ಎಷ್ಟು ಕೈಗಾರಿಕೆಗಳು ಮುಚ್ಚಿಹೋಗಿವೆ, ಅದರಲ್ಲಿ ಕ್ಷೀಣ ಸ್ಥಿತಿಯಲ್ಲಿರುವ ಕೈಗಾರಿಕೆಗಳು ಎಷ್ಟು?*

ಇ) *ಸಣ್ಣ ಕೈಗಾರಿಕೆ ಘಟಕಗಳು ರೋಗಗ್ರಸ್ಥ ಆಗಲಿಕ್ಕೆ ಹಾಗೂ ಮುಚ್ಚಿ ಹೋಗಲಿಕ್ಕೆ ಕಾರಣ ಏನು?*

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು) :

ಅ) 651

ಆ) 48

ಇ) 08

ಉ) ದುಡಿಯುವ ಬಂಡವಾಳದ ಕೊರತೆ ವಿದ್ಯುತ್ ಕೊರತೆ, ನಡೆಸುವ ಸಾಮರ್ಥ್ಯದ ಕೊರತೆ ಇತ್ಯಾದಿ.

ಚಾಮರಾಜ್ ನಗರಕ್ಕೆ ಕುಡಿಯುವ ನೀರು ಸರಬರಾಜು

424 - ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನ ಹಳ್ಳಿ ಕ್ಷೇತ್ರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಾಮರಾಜನಗರಕ್ಕೆ ಕಾವೇರಿ ನದಿಯಿಂದ ಕುಡಿಯುವ ನೀರನ್ನು ಪೂರೈಸಲು ಮತ್ತು ಒಳಚರಂಡಿಯ ನಿರ್ಮಾಣಕ್ಕೆ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ? (ವಿವರವನ್ನು ನೀಡುವುದು)*